ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಮಂಗಳವಾರ, ೨೬, ಮೇ, ೨೦೨೬ (ಜ್ಯೇಷ್ಠ, ೦೫, ಶಕವರ್ಷ, ೧೯೪೮) BENGALURU, TUESDAY, 26, MAY, 2026 (JYAISTHA , 05, SHAKAVARSHA, 1948)	ಸಂ. ೩೯೪ No. 394

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 17 ಪಿಇಎಸ್ 2026

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:26.05.2026.

ಅಧಿಸೂಚನೆ

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಪ್ರಕರಣದ (1) ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ 07 ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 01 ಇವರಿಗೆ ಕಳುಹಿಸಬಹುದು.

ಕರಡು ನಿಯಮಗಳು

1. **<u>ಶೀರ್ಷಿಕೆ ಮತ್ತು ಪ್ರಾರಂಭ</u>** :- (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು (ಎರಡನೇ ತಿದ್ದುಪಡಿ) 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **<u>5 ನೇ ನಿಯಮದ ತಿದ್ದುಪಡಿ</u>**:– ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 5 ರಲ್ಲಿ, 4 ನೇ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ, ಸಿಎಲ್-2ಎ ಮತ್ತು ಸಿಎಲ್-9ಎ ಸನ್ನದುಗಳ ಇ-ಹರಾಜಿನಲ್ಲಿ ಶೇಕಡವಾರು ಮೀಸಲಾತಿಯ ಪ್ರಮಾಣವು ಈ ಕೆಳಗಿನಂತಿರುತ್ತದೆ:-

ಕ್ರ.ಸಂ.	ಕ್ರ.ಸಂ. ಪ್ರವರ್ಗ ಶೇಕಡವಾರು ಮೀಸಲಾತಿ	ಕ್ರ.ಸಂ. ಪ್ರವರ್ಗ ಶೇಕಡವಾರು ಮೀಸಲಾತಿ
1	ಪರಿಶಿಷ್ಟ ಜಾತಿ-ಎ	5.25%
2	ಪರಿಶಿಷ್ಟ ಜಾತಿ-ಬಿ	5.25%
3	ಪರಿಶಿಷ್ಟ ಜಾತಿ-ಸಿ	4.5%
4	ಪರಿಶಿಷ್ಟ ಪಂಗಡ	3%

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/-
(ಭೀಮಪ್ಪ ಪ ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

GOVERNMENT OF KARNATAKA

No. FD 17 PES 2026

Karnataka Government Secretariat
Vidhana Soudha,
Dr. B.R. Ambedkar Veedhi,
Bengaluru, Dated: 26.05.2026.

NOTIFICATION

The draft of the following Rules to further amend the Karnataka Excise (Sale of Indian and Foreign Liquors) Rules, 1968, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of the said section for information of all persons likely to be affected thereby and notice is hereby given that the said draft will be taken up for consideration after seven days from the date of its publication in the official Gazette.

Any objections or suggestions which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Additional Chief Secretary to Government, Finance Department, Vidhana Soudha, Dr. B.R. Ambedkar Veedhi, Bengaluru -01.

DRAFT RULES

1. Title and commencement: - (1) These rules may be called the Karnataka Excise (Sale of Indian and Foreign Liquors) (Second Amendment) Rules, 2026.

(2) They shall come into force from the date of their final publication in the official Gazette.

2. Amendment of Rule 5:- In the Karnataka Excise (Sale of Indian and Foreign Liquors) Rules, 1968, in Rule 5, after the fourth proviso, the following proviso shall be inserted, namely:-

"Provided also that, the percentage of reservation in e-auction of CL-2A and CL-9A licences, shall be as follows:-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

Sl.No.	Category	Percentage of Reservation
1	Scheduled Caste-A	5.25%
2	Scheduled Caste-B	5.25%
3	Scheduled Caste-C	4.5%
4	Scheduled Tribe	3%

By Order and in the Name of
The Governor of Karnataka

Sd/-
(BHIMAPPA P AJOOR)
Under Secretary to Government,
Finance Department (Excise)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH